ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

ಸಂಖ್ಯೆ:ಜಅಇ/ಜ.ಕೋಶ/IWMP/ ಕೃ.ಅ-4/EPA-3/ 2011-12

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
8ನೇ ಮಹಡಿ, ಕಾವೇರಿ ಭವನ, ಕ.ಗೃ.ಮಂ.ಸಂಕೀರ್ಣ
ಕೆ.ಜಿ.ರಸ್ತೆ, ಬೆಂಗಳೂರು 560 009
ದಿನಾಂಕ:21-02-2012

**ಸುತ್ತೋಲೆ: 17 /2011-12**

| | |
|---|---|
| **ವಿಷಯ:** | **ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದ ಬ್ಯಾಚ್-3 ಯೋಜನೆಗಳಡಿ ಪ್ರವೇಶದ್ವಾರ ಚಟುವಟಿಕೆಗಳ ಅನುಷ್ಠಾನ ಕುರಿತು:** |
| **ಉಲ್ಲೇಖ:** | 1. No.WDD/Cell/AO-2/IWMP/7th SLNA/10-11 dtd.3.2.12 |
| | **2. ಸಂಖ್ಯೆ: ಜಅಇ/ಜ.ಕೋಶ/ಇಪಿಎ-ತೃ.ದಾನ್ಯ/ತಾಂ.4/11-12, ದಿನಾಂಕ: 30-5-2011.** |
| | **3. ಸಂಖ್ಯೆ: ಜಅಇ/ಜ.ಕೋಶ/IWMP/ EPA/2010-11, ದಿನಾಂಕ: 23-12-2010.** |

ಸಾಮಾನ್ಯ ಮಾರ್ಗಸೂಚಿ-2008 ರನ್ವಯ ಮತ್ತು ಉಲ್ಲೇಖ 1 ರಲ್ಲಿನ SLNA ತೀರ್ಮಾನದಂತೆ 2011-12ನೇ ಸಾಲಿನಲ್ಲಿ ಮಂಜೂರಾಗಿರುವ ಬ್ಯಾಚ್-3ರ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದ ಯೋಜನಾ ಪ್ರದೇಶದಲ್ಲಿ ಜನರ ವಿಶ್ವಾಸವನ್ನು ಗಳಿಸುವ ಸಲುವಾಗಿ ಪ್ರವೇಶದ್ವಾರ ಚಟುವಟಿಕೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಅದರಂತೆ ಒಟ್ಟು ಯೋಜನಾ ವೆಚ್ಚದಲ್ಲಿ ಪ್ರವೇಶ ದ್ವಾರ ಚಟುವಟಿಕಗಳಿಗಾಗಿ ಶೇ.3 ರಷ್ಟು ಅನುದಾನವನ್ನು ನಿಗಧಿಪಡಿಸಲಾಗಿದೆ. ಅದರಂತೆ ನಿಮ್ಮ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪ್ರವೇಶದ್ವಾರ ಚಟುವಟಿಕೆಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದು ಅನುಬಂಧ-3 ರ ನಮೂನೆಯಲ್ಲಿ ಕೇಂದ್ರ ಕಚೇರಿಗೆ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದೆ. ಜಿಲ್ಲಾವಾರು ಮತ್ತು ಯೋಜನಾವಾರು ಲಭ್ಯವಿರುವ ಗರಿಷ್ಠ ಶೇ.3 ರಷ್ಟು ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. **ಯೋಜನೆಯ ಬಗ್ಗೆ ಇಲಾಖೆಯ ಸಿಬ್ಬಂದಿಯು ತೀವ್ರ ತರಹದ ಪ್ರಚಾರ ನೀಡಿದ ನಂತರವೇ ಚಟುವಟಿಕೆಗಳನ್ನು ಅನುಷ್ಠಾನ ಮಾಡತಕ್ಕದ್ದು.**

**ಕೈಗೊಳ್ಳಬಹುದಾದ ಪ್ರವೇಶದ್ವಾರ ಚಟುವಟಿಕೆಗಳ ಪಟ್ಟಿ**

- ಯೋಜನಾ ವ್ಯಾಪ್ತಿಯ ಪ್ರತಿ ಹಳ್ಳಿಗೆ ಒಂದರಂತೆ ಜಾನುವಾರು ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು.
- ಗ್ರಾಮದಲ್ಲಿ ಹಳೆ ಗೋಕಟ್ಟೆ ದುರಸ್ತಿ/ ಗೋಕಟ್ಟೆ ನಿರ್ಮಾಣ.
- ನಾಲಾ ಬದು ನಿರ್ಮಾಣ.
- ಔಷಧಿಯ ಸಸಿಗಳ ಬೆಳಸಿ ವಿತರಣೆ.
- ಶಾಲಾ ಆವರಣದಲ್ಲಿ ಅಥವಾ ಸಮುದಾಯ ಕಟ್ಟಡಗಳ ಆವರಣದಲ್ಲಿ ಹಣ್ಣಿನ ಇಳುವರಿ ನೀಡುವ ಗಿಡಗಳನ್ನು ನೆಡುವುದು.
- ಸಣ್ಣ/ಅತಿ ಸಣ್ಣ ರೈತ, ಪ.ಜಾತಿ ಮತ್ತು ಪ.ಪಂಗಡ ಕುಂಟುಬಗಳಿಗೆ ಬರನಿರೋದಕ ಹಾಗೂ ಉತ್ತಮ ಇಳುವರಿ ನೀಡುವ ಸ್ಥಳೀಯ ತೃಣ ದಾನ್ಯಗಳ ವಿತರಣೆ
- ಬದುಗಳ ಮೇಲೆ ವಿವಿಧ ತೋಟಗಾರಿಕೆ ಬೆಳೆ ಬೀಜಗಳನ್ನು ಬಿತ್ತುವುದು/ಊಳುವುದು.
- ತರಕಾರಿ ಕಿರುಚೀಲ ವಿತರಣೆ.
- ತೆಂಗಿನ ಸಸಿಗಳನ್ನು/ಗಂಧದ ಸಸಿಗಳನ್ನು ಮನೆಯಂಗಳದಲ್ಲಿ ಬೆಳೆಸಲು ವಿತರಣೆ.
- ಯೋಜನಾ ವ್ಯಾಪ್ತಿಯ ಪ್ರತಿ ಹಳ್ಳಿಗೆ ಒಂದರಂತೆ ಸೋಲಾರ್ ಬೀದಿ ದೀಪಗಳನ್ನು ಸಮುದಾಯ ಕಟ್ಟಡ ಅಥವಾ ಶಾಲಾ ಕಾಲೇಜು ಆವರಣಗಳಲ್ಲಿ ಅಳವಡಿಸುವುದು.

ಸೋಲಾರ್ ಬೀದಿ ದೀಪಗಳನ್ನು ಅಳವಡಿಸುವ ಕುರಿತು ಈ ಕೆಳಗೆ ನೀಡಿರುವ ಸಂಸ್ಥೆಯೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

Karnataka Renewable Energy Development Limited, No. 39," Shanthigruha'' Bharat Scout & Guides Building, Palace Road, Bangalore -560001. Tel: 080-2282221, 2208109, 2207851, Fax: 080-2257379. E-mail:kredlnce@yahoo.co.in, Website:www. kredl.kar.nic.in.

ಸಹಿ/–
ಆಯುಕ್ತರು
ಜಲಾನಯನ ಅಭಿವೃದ್ದಿ ಇಲಾಖೆ

ಪ್ರತಿಯನ್ನು:

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ದಿ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಕೇಂದ್ರ ಕಚೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ.
3. ಆಯುಕ್ತರ/ನಿರ್ದೇಶಕರ ಆಪ್ತ ಶಾಖೆಗೆ.
4. ಕೃ.ಅ.ತ, ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
5. ಕಚೇರಿ ಕಡತಕ್ಕೆ.

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ಸಂಖ್ಯೆ:ಜಅಇ/ಜ.ಕೋಶ/IWMP/ ಕೃ.ಅ-4/EPA-3/ 2011-12

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
8ನೇ ಮಹಡಿ, ಕಾವೇರಿ ಭವನ,
ಕ.ಗೃ.ಮಂ.ಸಂಕೀರ್ಣ
ಕೆ.ಜಿ.ರಸ್ತೆ, ಬೆಂಗಳೂರು 560 009
ದಿನಾಂಕ:7-03-2012

**ಸುತ್ತೋಲೆ: 17(a) /2011-12**

| | |
|---|---|
| ವಿಷಯ: | ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದ ಬ್ಯಾಚ್-3 ಯೋಜನೆಗಳಡಿ ಪ್ರವೇಶದ್ವಾರ ಚಟುವಟಿಕೆಗಳ ಅನುಷ್ಠಾನ ಕುರಿತು: |
| ಉಲ್ಲೇಖ: | 1. ಸಂಖ್ಯೆ:ಜಅಇ/ಜ.ಕೋಶ/IWMP/ ಕೃ.ಅ-4/EPA-3/ 2011-12, ದಿನಾಂಕ:21-2-2012 |
| | 2. ಸಂಖ್ಯೆ: ಜಿಜಅಅ/ಕಾ/ತಾಂತ್ರಿಕ/ IWMP Batch-III/ EPA/2011-12,ದಿನಾಂಕ:5-3-2012 |

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬ್ಯಾಚ್-3 ಯೋಜನೆಯ ಜಲಾನಯನ ಪ್ರದೇಶದಲ್ಲಿ ಪ್ರವೇಶದ್ವಾರ ಚಟುವಟಿಕೆಗಳನ್ನು ಕೈಗೊಳ್ಳಲು ಸುತ್ತೋಲೆಯನ್ನು ನೀಡಲಾಗಿದ್ದು, ಅದರಂತೆ ಕ್ರಿಯಾ ಯೋಜನಯನ್ನು ತಯಾರಿಸಿ ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಲಾಗಿತ್ತು. ಮುಂದುವರೆದು ದಿನಾಂಕ: 3-3-2012 ರಂದು ನಡೆದ ವಿಭಾಗಿಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ತೀರ್ಮಾನದಂತೆ ಉಲ್ಲೇಖ-1 ರಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ ಪಟ್ಟಿಯನ್ನು ನೀಡಿದ್ದು, ಅದರಲ್ಲಿ ತೋಟಗಾರಿಕೆ ಮತ್ತು ಅರಣ್ಯ ಘಟಕಕ್ಕೆ ಸಂಬಂಧಿಸಿದಂತೆ ತೆಂಗಿನ ಮತ್ತು ಗಂಧದ ಸಸಿಗಳನ್ನು ಬೆಳಸಿ ವಿತರಣೆ ಮಾಡುವ ಬದಲು ಬೆಳಸಿರುವ ತೆಂಗಿನ ಮತ್ತು ಗಂಧದ ಸಸಿಗಳನ್ನು ಮನೆಯಂಗಳದಲ್ಲಿ ನಾಟಿಮಾಡಲು ಕ್ರಮಕೈಗೊಳ್ಳುವುದು.

ಮುಂದುವರೆದು ಉಲ್ಲೇಖ-2 ರಲ್ಲಿ ಜಿ.ಜ.ಅ.ಅ ಉತ್ತರಕನ್ನಡ ರವರು ಕೋರಿರುವಂತೆ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಅವಶ್ಯಕತೆ ಅನುಗುಣವಾಗಿ ಕಿಂಡಿ ಅಣೆಕಟ್ಟು ಮತ್ತು ಕಾಲು ಸೇತುವೆ ಕಾಮಗಾರಿಗಳನ್ನು ಪ್ರವೇಶದ್ವಾರ ಚಟುವಟಿಕೆಗಳಡಿ ಕೈಗೊಳ್ಳಲು ಅನುಮತಿ ನೀಡಿದೆ.

*( ಕಂಡಿಕೆ 41 ರಲ್ಲಿ ಅಯುಕ್ತರಿಂದ ಅನುಮೋದಿಸಲ್ಪಟಿದೆ)*

ಸಹಿ/-
ಆಯುಕ್ತರು
ಜಲಾನಯನ ಅಭಿವೃದ್ಧಿ
ಇಲಾಖೆ

ಪ್ರತಿಯನ್ನು:

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಕೇಂದ್ರ ಕಚೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ.
3. ಆಯುಕ್ತರ/ನಿರ್ದೇಶಕರ ಆಪ್ತ ಶಾಖೆಗೆ.
4. ಕೃ.ಅ.3, ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

ಸಂಖ್ಯೆ: ಜಅಇ/ಜ.ಕೋಶ/ಸ.ಸ.ಜವಾಬ್ದಾರಿ/ತಾಂ.4/10-11

ಆಯುಕ್ತರ ಕಛೇರಿ,
8ನೇ ಮಹಡಿ, ಕಾವೇರಿ ಭವನ, ಕ.ಗೃ.ಮಂ.ಸಂಕೀರ್ಣ
ಕೆ.ಜಿ.ರಸ್ತೆ, ಬೆಂಗಳೂರು 560 009
ದೂರವಾಣಿ #: 22100670 :: ಫ್ಯಾಕ್ಸ್ # 22100665
ಈಮೇಲ್: pvvjdaiga@gmail.com

ದಿನಾಂಕ:30-4-2011

## ಸುತ್ತೋಲೆ: 5/2011-12

**ವಿಷಯ:** ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ ಸರ್ಕಾರೇತರ ಸಂಸ್ಥೆ ಸಿಬ್ಬಂದಿಗಳ ನಿರ್ಧಿಷ್ಠವಾದ ಜವಾಬ್ದಾರಿಗಳ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ ಈಗಾಗಲೇ ಸರ್ಕಾರೇತರ ಸಂಸ್ಥೆಗಳ ಒಡಂಬಡಿಕೆಯಲ್ಲಿ ಸಂಸ್ಥೆಯ ಹಾಗೂ ಸಿಬ್ಬಂದಿಗಳ ಜವಾಬ್ದಾರಿಗಳನ್ನು ತಿಳಿಸಲಾಗಿದೆ. ಆದರೆ ಒಡಂಬಡಿಕೆ ಮಾಡಿಕೊಂಡಾಗ ಯೋಜನೆಯು ಅನುಷ್ಠಾನ ಪೂರ್ವ ಹಂತದಲ್ಲಿದ್ದು ನಮೂದಿಸಿರುವ ಜವಾಬ್ದಾರಿಗಳು ಮೇಲ್ನೋಟಕ್ಕೆ ಸಾಮನ್ಯ ಜವಾಬ್ದಾರಿಗಳಾಗಿ ಕಂಡು ಬರುತ್ತವೆ. ಅಲ್ಲದೆ ಅಲ್ಲಿ ಸ್ಪಷ್ಟ ಹಾಗೂ ನಿರ್ದಿಷ್ಠವಾದ ಜವಾವ್ದಾರಿಗಳನ್ನು ತಂಡದ ಮುಖ್ಯಸ್ಥರಿಗೆ ಹಾಗೂ ಅದಾಯ ಉತ್ಪನ್ನ ಪರಿಣಿತರಿಗೆ ಸ್ಪಷ್ಠವಾಗಿ ನಮೂದಿಸಿರುವುದಿಲ್ಲ. ಯೋಜನೆಯ ಅನುಷ್ಠಾನ ಹಂತದಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಸೇರ್ಪಡೆಯಾಗುತ್ತಿರುವ ಹೊಸ ವಿಷಯಗಳ ಅನುಸಾರವಾಗಿ ಒಪ್ಪಂದಲ್ಲಿ ಇರುವ ಜವಾಬ್ದಾರಿಗಳ ಜೊತೆಗೆ ತಂಡದ ಮುಖ್ಯಸ್ಥರ ಹಾಗೂ ಆದಾಯ ಉತ್ಪನ್ನ ಚಟುವಟಿಕೆ ಪರಿಣಿತರ ನಿರ್ದಿಷ್ಠ ಜವಾಬ್ದಾರಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು ಅವುಗಳ ಅನುಸಾರ ಸರ್ಕಾರೇತರ ಸಂಸ್ಥೆ ಸಿಬ್ಬಂದಿಗಳು ಯೋಜನೆ ಅನುಷ್ಠಾನದಲ್ಲಿ ತೊಡಿಗಿಸಿಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ಧಾರಿಯು ಜಿಲ್ಲಾ ಜಲಾನಯನ ಅಭಿವೃದ್ದಿ ಅಧಿಕಾರಿ/ಜಲಾನಯನ ಅಭಿವೃದ್ದಿ ತಂಡದ ಮೇಲೆ ಇರುತ್ತದೆ.

ಈ ಎಲ್ಲಾ ಕೆಲಸಗಳಲ್ಲಿ ಸರ್ಕಾರೇತರ ಸಂಸ್ಥೆಯ ಪಾತ್ರವು ಅತಿ ಮುಖ್ಯವಾಗಿದ್ದರು ಸಹಾ ಅವರಿಗಿಂತ ಹೆಚ್ಚಿನ ಜವಾಬ್ದಾರಿಯು ಯೋಜನಾ ಅನುಷ್ಠಾನ ಸಂಸ್ಥೆಯಾಗಿ (PIA) ಇಲಾಖೆಯ ಮೇಲೆ ಇರುತ್ತದೆ. ಆದುದರಿಂದ ಇಲಾಖೆಯು ಸರ್ಕಾರೇತರ ಸಂಸ್ಥೆಗಳೊಂದಿಗೆ ಉತ್ತಮ ಬಾಂದವ್ಯವನ್ನು ಬೆಳೆಸಿಕೊಂಡು ಸಂಸ್ಥೆಗಳು ಜವಾಬ್ದಾರಿಯುತವಾಗಿ ಯೋಜನಾ ಅನುಷ್ಠಾನದಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು
ಮತ್ತು ಸಂಯೋಜಕರು(IWMP)
ಜಲಾನಯನ ಅಭಿವೃದ್ಧಿ ಇಲಾಖೆ

ಪ್ರತಿಯನ್ನು:

2. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ದಿ ಅಧಿಕಾರಿಗಳು.
3. ಮೊದಲ ಮತ್ತು ಎರಡನೇ ಹಂತದ ಸರ್ಕಾರೇತರ ಸಂಸ್ಥೆಗಳಿಗೆ.
4. ಕೇಂದ್ರ ಕಛೇರಿಯ ಎಲ್ಲಾ ನೋಡಲ್ ಅಧಿಕಾರಿಗಳಿಗೆ.
5. ನಿರ್ದೇಶಕರು/ ಆಯುಕ್ತರ ಆಪ್ತ ಶಾಖೆಗೆ.
6. ತಾಂತ್ರಿಕ ಅಧಿಕಾರಿಗಳು-3 ಇವರಿಗೆ, ಸುತ್ತೋಲೆಯ ಸಂಕಲನಕ್ಕಾಗಿ.

## <u>ಸರ್ಕಾರೇತರ ಸಂಸ್ಥೆ ತಂಡದ ಮುಖ್ಯಸ್ಥರ ಜವಾಬ್ದಾರಿ ಮತ್ತು ಪಾತ್ರಗಳು</u>

1. ಆದಾಯ ಉತ್ಪನ್ನ ಚಟುವಟಿಕೆಗಳ ತಜ್ಞರಿಗೆ ಹೇಗೆ ಸ್ವ ಸಹಾಯ ಸಂಘಗಳ ಎಲ್ಲಾ ಕೆಲಸಗಳಲ್ಲಿ ಜವಬ್ದಾರಿ ಇರುತ್ತದೆಯೋ ಅದೆ ರೀತಿ ತಂಡದ ಮುಖ್ಯಸ್ಥರಿಗೆ ಬಳಕೆದಾರ ಗುಂಪುಗಳ ಸಂಪೂರ್ಣ ಜವಾಬ್ದಾರಿ ಇರುತ್ತದೆ. ಅಂದರೆ ಭೂ ಆದಾರಿತ ಚಟುವಟಿಕೆಗಳ ಅನುಷ್ಠಾನದಲ್ಲಿ ತಂಡದ ಮುಖ್ಯಸ್ಥರ ಜವಾಬ್ದಾರಿ ಅತಿ ಮುಖ್ಯವಾಗಿರುತ್ತದೆ.
2. ಬಳಕೆದಾರರ ಗುಂಪುಗಳನ್ನು ರಚಿಸುವುದು ಹಾಗೂ ಅವುಗಳ ಬಲವರ್ದನೆಯಲ್ಲಿ ತಂಡದ ಮುಖ್ಯಸ್ಥರ ಜವಾಬ್ದಾರಿಯು ಅತಿ ಮುಖ್ಯವಾಗಿರುತ್ತದೆ. ಬಳಕೆದಾರರ ಗುಂಪುಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದುಕೊಂಡು ಅವರು ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿ ಕೊಳ್ಳವುದು.
3. ಜಂಟಿ ಭಾದ್ಯತಾ ಗುಂಪುಗಳ ರಚನೆ ಹಾಗೂ ಅವುಗಳು ಸ್ವ ಸಹಾಯ ಸಂಘಗಳ ಮಾದರಿಯಂತೆ ಕಾರ್ಯನಿರ್ವಹಿಸುವ ಹಾಗೆ ನೋಡಿಕೊಳ್ಳುವುದು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಸಂಪರ್ಕ ಏರ್ಪಡಿಸುವುದು.
4. ಬೆಳೆ ಉತ್ಪದಾನೆ ಪದ್ದತಿ ಅಡಿಯಲ್ಲಿ (Production Systems) ತೆಗೆದುಕೊಳ್ಳುವ ವಿವದ ಚಟುವಟಿಕೆಗಳು ಹಾಗೂ ಪ್ರಾತ್ಯಷಿಕೆಗಳಗೆ ಪಲಾನುಭವಿಗಳನ್ನು ಗುರುತಿಸುವುದು ಹಾಗೂ ಅನುಷ್ಠಾನದಲ್ಲಿ ಸಹಕರಿಸುವುದು.
5. ಬಳಕೆದಾರ ಹಾಗೂ ಜಂಟಿ ಬಾದ್ಯತ ಗುಂಪುಗಳಿಗೆ ಹಳ್ಳಿಯ ಮಟ್ಟದ ತಾಂತ್ರಕ ತರಬೇತಿಗಳನ್ನು ಜಲಾನಯನ ಅಭಿವೃದ್ದಿ ತಂಡದ ಸಹಕಾರದೊಂದಿಗೆ ಸಂಘಟಿಸುವುದು ಹಾಗೂ ಕೆಲವು ತರಬೇತಿಗಳನ್ನು ಸ್ವತಹ ಕೊಡುವುದು.
6. ನಿದಿಷ್ಟವಾದ ಚಟುವಟಿಕೆಗಳಿಗೆ ಪಲಾನುಭವಿಗಳನ್ನು ಅಥವಾ ಗುಂಪುಗಳನ್ನು(**CIG**) ಗುರುತಿಸುವುದು ಹಾಗೂ ಅನುಷ್ಠಾನದಲ್ಲಿ ಜಲಾನಯನ ತಂಡಕ್ಕೆ ಸಹಕರಿಸುವುದು. ಉದಾಹರಣೆ: ಜೇನು ಸಾಕಾಹಣೆ, ಬೆಳೆ ವಿಮೆ,ಎರೆಹುಳು ಗೊಬ್ಬರ ಇತ್ಯಾದಿ.
7. ಸಮುದಾಯ ಸಂಘಟಿಸುವುದರ ಜೊತೆಗೆ ಪ್ರವೇಶದ್ವಾರ ಚಟುವಟಿಕೆಗಳ ಗುರುತಿಸುವಿಕೆಯಲ್ಲಿ ಮತ್ತು ಅನುಷ್ಟಾನದಲ್ಲಿ ಜಲಾನಯನ ಅಭಿವೃದ್ಧಿ ತಂಡಕ್ಕೆ ಸಹಕರಿಸುವುದು.
8. ಜಲಾನಯನ ಅಭಿವೃದ್ದಿ ತಂಡದ ಸಿಬ್ಬಂದಿ, ಕಾರ್ಯಕಾರಿ ಸಮಿತಿ, ಬಳಕೆದಾರರ ಗುಂಪುಗಳು ಮತ್ತು ಸ್ವ ಸಹಾಯ ಸಂಘಗಳ ಸಹಯೋಗದೊಂದಿಗೆ ನಿಗದಿತ ಕಾಲಮಿತಿಯಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಸಿದ್ದಪಡಿಸುವುದು ಮತ್ತು ಅದನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ  ಕಛೇರಿಗೆ ಸಲ್ಲಿಸುವುದು, ಕಾರ್ಯಕಾರಿ ಸಮಿತಿಗೆ ಮಾಸಿಕ ವಾರ್ಷಿಕ ಕ್ರಿಯಾ ಯೋಜನೆ ಸಿದ್ದಪಡಿಸಲು ಸಹಕರಿಸುವುದು ಮತ್ತು ಖಾಸಗಿ ಜಮೀನುಗಳ ಉಪಚಾರಕ್ಕಾಗಿ ವಂತಿಗೆಯನ್ನು ಸಂಗ್ರಹಿಸಲು ಜಲಾನಯನ ಅಭಿವೃದ್ದಿ ತಂಡಕ್ಕೆ  ಸಹಕರಿಸುವುದು.
9. ಗ್ರಾಮ ಪಂಚಾಯಿತಿ/ ಜಲಾನಯನ ಅಭಿವೃದ್ದಿ ತಂಡಕ್ಕೆ ಮಹಿಳಾ ಪ್ರಾತಿನಿದ್ಯ ಮತ್ತು ಶೋಷಿತ ಸಮುದಾಯದ ಪ್ರಾತಿನಿತ್ಯದೊಂದಿಗೆ ಕಾರ್ಯಕಾರಿ ಸಮಿತಿ ರಚನೆಯಲ್ಲಿ ಸಹಕರಿಸುವುದು ಹಾಗೂ ಕಾರ್ಯಕಾರಿ ಸಮಿತಿಯಲ್ಲಿ ಪ್ರತಿ ನಿಧಿಸಲು ಬಳಕೆದಾರರ ಗುಂಪುಗಳಿಂದ ಸದಸ್ಯರ ಆಯ್ಕೆ ಪ್ರಕ್ರಿಯೆಯಲ್ಲಿ ಸಹಕಾರಿಯಾಗುವುದು ಹಾಗೂ ಮಾರ್ಗಸೂಚಿಯಂತೆ ಸರತಿಯ ಮೇಲೆ (**Rotation** ) ಪ್ರತಿ ವರ್ಷ ಹೊಸಬರನ್ನು ಆಯ್ಕೆ ಮಾಡುವುದು.
10. **MIS** ನಲ್ಲಿ ಪ್ರಗತಿಯನ್ನು  ಕ್ರಮಬದ್ದವಾಗಿ ಉನ್ನತಿಕರಿಸಿ(**Update**)  ಪ್ರಗತಿ ವರದಿಯನ್ನು ಸಕಾಲದಲ್ಲಿ ಸಲ್ಲಿಸುವುದು(**MIS** ತಂತ್ರಾಂಶವನ್ನು ಒದಿಗಿಸುವ ತನಕ ನಿಗಿದಿತ ನಮೂನೆಗಳಲ್ಲಿ ವರದಿಗಳನ್ನು ಸಲ್ಲಿಸುವುದು).
11. ಜಲಾನಯನ ಅಭಿವೃದ್ದಿ ಇಲಾಖೆಯ ಜೊತೆ ಪರಸ್ಪರ ಮಾತುಕತೆ ಮತ್ತು ಒಪ್ಪಂದದ ಮೂಲಕ ಇತರೆ ಯಾವುದಾದರೂ ಸಂಬಂದಿತ ಕಾರ್ಯ ನಿರ್ವಹಿಸುವುದು.

## <u>ಸರ್ಕಾರೇತರ ಸಂಸ್ಥೆಯ ಆಧಾಯ ಉತ್ಪನ್ನ ಚಟುವಟಿಕೆಗಳ/ತರಬೇತಿ ತಜ್ಞರ ಪಾತ್ರ ಮತ್ತು ಜವಾಬ್ದಾರಿಗಳು.</u>

1. ಜಲಾನಯನ ಅಭಿವೃದ್ಧಿ ತಂಡ ಮತ್ತು ತಂಡದ ಮುಖಂಡರ ಮಾರ್ಗದರ್ಶನದಲ್ಲಿ ಸಮುದಾಯ ಸಂಘಟನೆಗಳ ಸಾಮರ್ಥ್ಯ ಬಲವರ್ಧನೆ ಮತ್ತು ಆಧಾಯ ಉತ್ಪನ್ನ ಚಟುವಟಿಕೆಗಳ ಒಟ್ಟಾರೆ ಜವಾಬ್ದಾರಿ.
2. ಪ್ರಸ್ತುತ ಅಸ್ತಿತ್ವದಲ್ಲಿ ಇರುವ ಸ್ವ ಸಹಾಯ ಗುಂಪುಗಳ ಮೂಲ ಮಾಹಿತಿ ಸಮಿಕ್ಷೆ ಮತ್ತು ಮಾರ್ಗಸೂಚಿಯಂತೆ ಅವಶ್ಯವಿದ್ದಲ್ಲಿ ಹೊಸ ಸ್ವ ಸಹಾಯ ಗುಂಪುಗಳ ರಚನೆ ಮಾಡುವುದು.

3. ಸ್ವ ಸಹಾಯ ಗುಂಪುಗಳ ಮೌಲ್ಯಮಾಪನ ಮತ್ತು ಉತ್ತಮೀಕರಣ.ಸ್ವ–ಸಹಾಯ ಗುಂಪಿನವರಿಗೆ ಸಲಹೆ ಮತ್ತು ತಿಳುವಳಿಕೆ ಕೊಡುವ ಮುಖಾಂತರ ಯಾವುದಾದರು ಸ್ವ–ಸಹಾಯ ಗುಂಪು ಸರಾಸರಿಗಿಂತ ಕಡಿಮೆ ಶ್ರೇಣಿಯಲ್ಲಿದ್ದರೆ, ಅವುಗಳನ್ನು ಗುರುತಿಸಿ ಉತ್ತಮ ಶ್ರೇಣಿಗಳಿಸಲು ಸಹಾಯ ಮಾಡುವುದು.

4. ಸ್ವ ಸಹಾಯ ಗುಂಪುಗಳ ಸಭೆಗೆ ಹಾಜರಾಗುವುದು. ತಿಂಗಳಿಗೆ ಒಮ್ಮೆಯಾದರು ಪ್ರತಿ ಸ್ವ ಸಹಾಯ ಗುಂಪಿಗೆ ಭೇಟಿ ನೀಡುವುದು ಹಾಗೂ ಮಾರ್ಗದರ್ಶನ ಮಾಡುವುದು.

5. ಕಾರ್ಯಕಾರಿ ಸಮಿತಿಯಲ್ಲಿ ಪ್ರತಿ ನಿಧಿಸಲು ಸ್ವಸಹಾಯ ಸಂಘಗಳಿಂದ ಸದಸ್ಯರ ಆಯ್ಕೆ ಪ್ರಕ್ರಿಯೆಯಲ್ಲಿ ಸಹಕಾರಿಯಾಗುವುದು ಹಾಗೂ ಮಾರ್ಗಸೂಚಿಯಂತೆ ಸರತಿಯ ಮೇಲೆ (**Rotation** ) ಪ್ರತಿ ವರ್ಷ ಹೊಸಬರನ್ನು ಆಯ್ಕೆ ಮಾಡುವುದು.

6. ಸ್ವ ಸಹಾಯ ಸಂಘಗಳಿಗೆ ತರಬೇತಿಗಳನ್ನು ಸಂಘಟಿಸುವುದು, ತರಬೇತಿ ನೀಡುವುದು ಹಾಗೂ ಮಾರ್ಗಸೂಚಿಯನುಸಾರ ಸ್ವ ಸಹಾಯ ಗುಂಪುಗಳಿಗೆ ಅಧ್ಯಯನ ಪ್ರವಾಸ ಏರ್ಪಡಿಸುವುದು.

7. ಮಾರ್ಗಸೂಚಿಯನುಸಾರ ಉದ್ದಿಮೆಶೀಲತ ಜಾಗೃತಿ ಕಾರ್ಯಕ್ರಮ ಮತ್ತು ಕೌಶಲ್ಯ ಅಭಿವೃದ್ದಿ ತರಬೇತಿಗಾಗಿ ಪ್ರತಿ ಸ್ವ ಸಹಾಯ ಗುಂಪುಗಳಿಂದ ಫಲಾನುಭವಿಗಳನ್ನು ಗುರುತಿಸುವುದು ಹಾಗೂ ತರಬೇತಿಗಳನ್ನು ಸಂಘಟಿಸುವುದು.

8. ಸ್ಥಳೀಯ ಸಂಪನ್ಮೂಲಗಳು ಮತ್ತು ಅವಕಾಶಗಳ ಆಧಾರದ ಮೇಲೆ ಭೂ ಆಧಾರಿತ ಮತ್ತು ಭೂಯೇತರ ವಿವಿಧ ಆಧಾಯ ಉತ್ಪನ್ನ ಚಟುವಟಿಕೆಗಳನ್ನು ಜನರ ಸಹಭಾಗಿತ್ವದ ಮುಖಾಂತರ ಗುರುತಿಸುವುದು.

9. ಅನುದಾನದ ಬಿಡುಗಡೆಗಾಗಿ ಆಧಾಯ ಉತ್ಪನ್ನ ಚಟುವಟಿಕೆಗಳ ಉಪ ಯೋಜನೆಗಳನ್ನು ಸ್ವ ಸಹಾಯ ಸಂಘದ ಮಟ್ಟದಲ್ಲಿ ಕ್ರೂಡೀಕರಿಸಿ ಜಲಾನಯನ ಸಮಿತಿಗೆ ಸಲ್ಲಿಸುವುದು ಹಾಗೂ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಗಳೊಡನೆ ಸಂಪರ್ಕ ಏರ್ಪಡಿಸುವುದು.

10. ಕಾರ್ಯಕಾರಿ ಸಮಿತಿ ಮೂಲಕ ಸ್ವ ಸಹಾಯ ಗುಂಪುಗಳಿಗೆ ಅನುದಾನ ವರ್ಗಾವಣೆಯಾಗಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು. ಯೋಜನೆಯ ಅನ್ವಯ ಎಲ್ಲಾ ಫಲಾನುಭವಿಗಳು ಅವರ ಚಟುವಟಿಕೆಗಳನ್ನು ಪ್ರಾರಂಭಿಸಿರುವುದನ್ನು ಖಾತ್ರಿ ಮಾಡಿಕೊಳ್ಳುವುದು.

11. ಆಧಾಯ ಉತ್ಪನ್ನ ಚಟುವಟಿಕೆಗಳನ್ನು ಪ್ರಾರಂಭಿಸಿರುವ ಉದ್ಯಮೆಗಳನ್ನು ಆಗಿಂದಾಗ್ಗೆ ಬೇಟಿ ಮಾಡುತ್ತಿರುವುದು ಹಾಗೂ ಪ್ರಗತಿಯನ್ನು ವಿಶ್ಲೇಷಣೆ ಮಾಡಿ ವರದಿ ಸಲ್ಲಿಸುವುದು. ಯಾವುದಾದರೂ ಸಮಸ್ಯೆಗಳು ಇದ್ದರೆ ಮೇಲಿನ ಅಧಿಕಾರಿಗಳೊಂಡನೆ ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು.

12. ಪಲಾನುಭವಿಗಳು ತೆಗೆದುಕೊಂಡ ಅಧಾಯ ಉತ್ಪನ್ನ ಚಟುವಟಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳ ಹಾಗೂ ತಯಾರಿಸಿದ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಗುರುತಿಸುವಲ್ಲಿ ಸಹಕರಿಸುವುದು.

13. **MIS** ನಲ್ಲಿ ಅದಾಯ ಉತ್ತನ್ನ ಚಟುವಟಿಕೆಗಳಿಗೆ ಸಂಬಂದಿಸಿದ ಪ್ರಗತಿಯನ್ನು ಕ್ರಮಬದ್ದವಾಗಿ ಉನ್ನತಿಕರಿಸಿ(**Update**) ಪ್ರಗತಿ ವರದಿಯನ್ನು ಸಕಾಲದಲ್ಲಿ ಸಲ್ಲಿಸುವುದು(**MIS** ತಂತ್ರಾಂಶವನ್ನು ಒದಿಗಿಸುವ ತನಕ ನಿಗಿದಿತ ನಮೂನೆಗಳಲ್ಲಿ ವರದಿಗಳನ್ನು ಸಲ್ಲಿಸುವುದು).

14. ಸ್ವ ಸಹಾಯ ಗುಂಪುಗಳ ವಿವರಗಳನ್ನೊಳಗೊಂಡ ದಾಖಲಾತಿಗಳ ನಿರ್ವಹಣೆ ಮತ್ತು ಸ್ವ ಸಹಾಯ ಗುಂಪುಗಳ ಹೆಸರು ಸದಸ್ಯರ ಸಂಖ್ಯೆ ಮತ್ತು ವಾರದ ಸಭೆಯ ದಿನಾಂಕ ಇತ್ಯಾದಿ ಕನಿಷ್ಠ ಮಾಹಿತಿಗಳನ್ನು **NGO** ಕಛೇರಿಯಲ್ಲಿ ಪ್ರದರ್ಶಿಸುವುದು.

15. ಸ್ವ ಸಹಾಯ ಗುಂಪುಗಳ ಉಳಿತಾಯ, ಸಾಲ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳಲ್ಲಿ ಸಹಕಾರಿಯಾಗುವುದು.

16. ಗ್ರಾಮ ಸಭೆಗಳಿಗೆ ಹಾಜರಾಗುವುದು ಮತ್ತು ಸ್ವ ಸಹಾಯ ಗುಂಪುಗಳ ಸದಸ್ಯರ ಪಾಲ್ಗೊಳ್ಳುವಿಕೆ ಮತ್ತು ಅವರ ವಿಷಯಗಳು ಸರಿಯಾಗಿ ಗ್ರಾಮ ಸಬೆಗಳಲ್ಲಿ ಗಮನಿಸಲ್ಪಡುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.

17. ಹಾಲಿ ಇರುವ ಒಕ್ಕೂಟದೊಂದಿಗೆ ಸ್ವ ಸಹಾಯ ಗುಂಪುಗಳನ್ನು ಒಗ್ಗೂಡಿಸುವುದು ಅಥವಾ ನೂತನ ಒಕ್ಕೂಟಗಳನ್ನು ಸ್ಥಾಪಿಸಲು ಸಹಕರಿಸುವುದು.

18. ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಜೊತೆ ಪರಸ್ಪರ ಮಾತುಕತೆ ಮತ್ತು ಒಪ್ಪಂದ ಮೂಲಕ ವಹಿಸುವ ಇತರೆ ಯಾವುದಾದರು ಸಂಬಂಧಿತ ಕಾರ್ಯ ನಿರ್ವಹಿಸುವುದು.

- ಬಳಕೆದಾರರ ಗುಂಪಿನ ಸದಸ್ಯರಿಗೆ ಅವರು ಅನುಷ್ಟಾನ ಮಾಡ ಬೇಕಾದ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ನೀಡಲು ವ್ಯವಸ್ಥೆ ಮಾಡುವುದು.
- ಬಳಕೆದಾರರ ಗುಂಪಿನ ಸದಸ್ಯರಿಗೆ ಅವರ ಕೃಷಿ ಜಮೀನಿನಲ್ಲಿ ಕೃಷಿ ಉತ್ಪನ್ನ ಹಾಗೂ ಉತ್ಪಾದಕತೆ ಹೆಚ್ಚಿಸಲು ಸಾಧ್ಯವಾಗುವ ತಂತ್ರಜ್ಞಾನ ಅಳವಡಿಕೆಗೆ ಪ್ರಾತ್ಯಕ್ಷತೆ ಮತ್ತು ತಂತ್ರಜ್ಞಾನ ಪರಿಚಯ ಮಾಡಿಸಲು ವ್ಯವಸ್ಥೆ ಮಾಡುವುದು.
- ಸ್ಥಳೀಯ ಬ್ಯಾಂಕ್ ಅಧಿಕಾರಿಯವರಿಂದ ಬಳಕೆದಾರರ ಗುಂಪಿನ ಸದಸ್ಯರಿಗೆ ಜಂಟಿ ಭಾದ್ಯತಾ ಗುಂಪುಗಳನ್ನಾಗಿಸಿ ಸದರಿ ಕಾರ್ಯಕ್ರಮದ ಉಪಯೋಗ ಪಡೆಯಲು ಸಂಪರ್ಕ ಸಂವಹನ ನಡೆಸಲು ವ್ಯವಸ್ಥೆ ಏರ್ಪಡಿಸುವುದು.
- ಸ್ವ ಸಹಾಯ ಗುಂಪಿನ ಸದಸ್ಯರು ಜಲಾನಯನ ಅಭಿವೃದ್ದಿ ಯೋಜನೆಯಲ್ಲಿ ತಮ್ಮನ್ನು ಸಮರ್ಥವಾಗಿ ಆದಾಯ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ, ಯಶೋಗಾಥೆಗಳ ಮಾಹಿತಿ ಮತ್ತು ಇತರೆ ಕ್ಷೇತ್ರಗಳ ಯಶಸ್ವಿಗಳಾಗಿರುವ ಸ್ವ ಸಹಾಯ ಗುಂಪಿನ ಸದಸ್ಯರಿಂದ ಉತ್ಪನ್ನ ತಯಾರಿಕೆಯ ಪ್ರದರ್ಶನ ಮತ್ತು ಚರ್ಚೆಗೆ ಅವಕಾಶ ಕಲ್ಪಿಸುವುದು.
- "ಮಳೆಆಶ್ರಿತ ಪ್ರದೇಶದ ಅಭಿವೃದ್ದಿ ಕಾರ್ಯಕ್ರಮ"(RADP) ಅನುಷ್ಟಾನ ಕುರಿತು ಜಲಾನಯನ ಪ್ರದೇಶದ ರೈತರಿಗೆ ಮಾಹಿತಿ ನೀಡಲು ವ್ಯವಸ್ಥೆ ಮಾಡುವುದು.
- ಖಾಸಗೀ ಸಂಸ್ಥೆಯವರಿಂದ ಗ್ರಾಮೀಣ ಪ್ರದೇಶದಲ್ಲಿ ಸೌರಶಕ್ತಿ ಬಳಕೆಗೆ ಮತ್ತು ಅಸಂಪ್ರದಾಯಕ ಇಂದನದ ಉಪಯುಕ್ತತೆಗಾಗಿ ವಿಶೇಷವಾದ ಉಪಕರಣಗಳ ಪ್ರದರ್ಶನ ಏರ್ಪಡಿಸಿ, ತಿಳುವಳಿಕೆ ನೀಡಿ, ಸ್ವ ಸಹಾಯ ಗುಂಪನ ಸದಸ್ಯರು ಕ್ಷೇತ್ರಮಟ್ಟದಲ್ಲಿ ಸದರಿ ಉಪಕರಣಗಳ ಮಾರಾಟಕ್ಕೆ ಏಜನ್ಸಿಪಡೆಯಲು ಚಿಂತನೆಗೆ ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡುವುದು.
- ಪಶು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವುದು.
- ಇತರೆ ಯಾವುದಾದರೂ ಹೊಸ ತಾಂತ್ರಿಕತೆಗಳನ್ನು ಪರಿಚಯಿಸಲು ವ್ಯವಸ್ಥೆ ಮಾಡುವುದು.

ಜಲಾನಯನ ಮೇಳ ಏರ್ಪಡಿಸಲು ತಗುಲುವ ವೆಚ್ಚವನ್ನು ಸಮುದಾಯ ಆಧಾರಿತ ಸಂಘಗಳು ಮತ್ತು ಸಾಮರ್ಥ್ಯ ಬಲವರ್ಧನೆ (**Institution and Capacity Building**) ಘಟಕದಡಿ ವೆಚ್ಚವನ್ನು ಭರಿಸಲು ಸೂಚಿಸಿದೆ. ಈ ಕುರಿತು, ಈ ಪತ್ರಕ್ಕೆ ಅವಶ್ಯಕತೆ ಇರುವ ಅಂದಾಜು ವೆಚ್ಚ ಪಟ್ಟಿ ಮತ್ತು ಮಾಹಿತಿ ಮ್ಯಾಟ್ರಿಕ್ಸ್ ಲಗತ್ತಿಸಿದೆ. ಸದರಿ ಅಂದಾಜು ವೆಚ್ಚ ಪಟ್ಟಿ ಮತ್ತು ಮ್ಯಾಟ್ರಿಕ್‌ನಲ್ಲಿ ನೀಡಿರುವ ಮಾಹಿತಿಯ ಅನ್ವಯ ಸೂಕ್ತ ಕ್ರಮ ವಹಿಸಿಲು ಸೂಚಿಸಿದೆ.

ಕೃಷಿ ಇಲಾಖೆಯಲ್ಲಿ ಕೃಷಿ ಉತ್ಸವ ಏರ್ಪಡಿಸಿದ ಮಾದರಿಯಲ್ಲಿ ಕಾರ್ಯಕ್ರಮವನ್ನು ರೂಪಿಸುವುದು. ಸ್ಥಳೀಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಇಲಾಖೆ, ಅರಣ್ಯ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಖೆಗಳ ಸಹಯೋಗದೊಂದಿಗೆ ಏರ್ಪಡಿಸಲು ಸೂಚಿಸಿದೆ. ಕಾರ್ಯಕ್ರಮದ ಬಗ್ಗೆ ಸ್ಥಳೀಯವಾಗಿ ಸಾಕಷ್ಟು ಪ್ರಚಾರ ನೀಡುವುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
(SLNA) ಮತ್ತು ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ

ಪ್ರತಿಯನ್ನು:

1. ಕೇಂದ್ರ ಕಛೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ.
7. ನಿರ್ದೇಶಕರು/ ಆಯುಕ್ತರ ಆಪ್ತ ಶಾಖೆಗೆ.
8. ತಾಂತ್ರಿಕ ಅಧಿಕಾರಿಗಳು-3, ಇವರಿಗೆ, ಸುತ್ತೋಲೆಯ ಸಂಕಲನಕ್ಕಾಗಿ.

## ಜಲಾನಯನ ಮೇಳ ಆಚರಿಸುವುದರ ಕುರಿತು ಮ್ಯಾಟ್ರಿಕ್ಸ್; (Conducting Jalanayana Mela-Matrix)

| ಕ್ರ.ಸಂ. Sl.No. | ವಿಷಯ subject | ಹೇಗೆ ಮಾಡುವುದು? How to do? | ಯಾರು, ಎಲ್ಲಿ ಮಾಡಬೇಕು? Who has to do and Where? | ಏನೆಲ್ಲಾ ಬೇಕು? What to do? | ಸಂವಹನ ವಿವರ. Details of Communication. |
|---|---|---|---|---|---|
| 1. | ತೀಮ್/ವಿಷಯ. **Theme/Subject.** "ನೋಡಿ, ಮಾಡಿ, ತಿಳಿದು ಕಲಿಯುವ ಜಲಾನಯನ ಮೇಳ". **See, Do, and Understand- Learning Jalanayana Mela.** | ಇದು ಒಂದು ಯೋಜನಾ ಮಟ್ಟದ ತರಬೇತಿ ಮೇಳ. | ಜಲಾನಯನ ತಂಡ ಮತ್ತು ಸರ್ಕಾರೇತರ ಸಂಸ್ಥೆಯ ಸಿಬ್ಬಂದಿಯವರು, ಆರಿಸಿದ ಸೂಕ್ತ ಉಪ ಜಲಾನಯನದ ಗ್ರಾಮದಲ್ಲಿ | ಸಮುದಾಯ ಸಂಸ್ಥೆಯ ಸದಸ್ಯರಿಗೆ ಆಯಾ ಜಿಲ್ಲೆಗೆ ಸೂಕ್ತವಾದ ಆವಿಷ್ಕಾರ ಮಾಡಲಾಗಿರುವ ತಂತ್ರಜ್ಞಾನಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷತೆ. | ಸೂಕ್ತ ರೀತಿಯಲ್ಲಿ ಎಲ್ಲಾ ಮಾಧ್ಯಮಗಳ ಮೂಲಕ, ಎಲ್ಲಾ ಪಾಲುದಾರರಿಗೆ ತಿಳಿಯುವಂತೆ ವ್ಯವಸ್ಥೆಗೊಳಿಸ ಬೇಕು. |
| 2. | ಯಾವಾಗ? ಎಷ್ಟು ದಿನ? **Time Frame** | ಒಂದು ದಿನ? 2011 ಜೂನ್ 3 ನೇ ವಾರದಿಂದ ಜುಲೈ 3 ನೇ ವಾರದವರಿಗೆ **One days from 3rd wk of June 2011 to 3 rd wk of July 2011.** | | | |
| 3. | ವ್ಯವಸ್ಥೆಗಳು. **Arrangements.** | ಎಲ್ಲರಿಗೂ ಅನುಕುಲವಿರುವ ಹಾಗೂ ಸಂಪರ್ಕವಿರುವ ಪ್ರದೇಶದಲ್ಲಿ ಏರ್ಪಡಿಸಬೇಕು. | | | |
| 4. | ಸ್ಥಳಾವಕಾಶ. **Space required.** | ಸಾಕಷ್ಟು ಜಾಗ ಇರುವ ಪ್ರದೇಶದಲ್ಲಿ ಏರ್ಪಡಿಸಬೇಕು. | | | |
| 5. | ಭಾಗವಹಿಸುವಿಕೆ. **Participation.** | ಸ್ವ ಸಹಾಯ ಗುಂಪುಗಳು,ಬಳಕೆದಾರರ ಗುಂಪುಗಳು ಮತ್ತು ಜಲಾನಯನ ಸಮಿತಿ ಸದಸ್ಯರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಬೇಕು. | | | |
| 6. | ತಂತ್ರಜ್ಞಾನಗಳ ಪ್ರದರ್ಶನ. **Display of Technologies.** | ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ ಹಾಗೂ ರೇಷ್ಮೆ ಉತ್ಪಾದನಾ ರಂಗದಲ್ಲಿ, ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಬಳಸ ಬಹುದಾದ ಎಲ್ಲಾ ತಂತ್ರಜ್ಞಾನಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷತೆ ನಡೆಸಬೇಕು. | | | |
| 7. | ಸಂಸ್ಥೆಗಳ ಭಾಗವಹಿಸುವಿಕೆ. **Institutional Participation.** ಸಹಭಾಗಿತ್ವ.**Sponsorship.** | ಕೃಷಿ, ತೋಟಗಾರಿಕೆ, ಪಶು ಮತ್ತು ಮೀನುಗಾರಿಕೆ ವಿಶ್ವ ವಿಧ್ಯಾನಿಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು, ಹಾಗೂ ಖಾಸಗಿ ಕ್ಷೇತ್ರದ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ನಡೆಸಬೇಕು. | | | |

<table>
<tr><td>8.</td><td>ಆರ್ಥಿಕತೆ ಅವಶ್ಯಕತೆಗಳು.<br>Financial requirements.</td><td>ಪ್ರತೀ ಯೋಜನೆಗೆ ಒಂದು ಜಲಾನಯನ ಮೇಳ ಏರ್ಪಡಿಸಲು ರೂ.1 ಲಕ್ಷ ಅನುದಾನ ಮೀರದಂತೆ ಸಮುದಾಯ ಆದಾರಿತ ಸಂಘಗಳು ಮತ್ತು ಸಾಮರ್ಥ್ಯ ಬಲವರ್ದನೆ ಘಟಕದಡಿ ಲಬ್ಯವಿರುವ ಅನುದಾನದಲ್ಲಿ ವೆಚ್ಚ ಭರಿಸುವುದು.</td></tr>
<tr><td>9.</td><td>ವ್ಯಾಪರಕ್ಕೆ ಅವಕಾಶಗಳು.<br>Business Opportunities.</td><td>• ಖಾಸಗೀ ಸಂಸ್ಥೆಯವರು<br>• ಸ್ವ ಸಹಾಯ ಗುಂಪುಗಳು ವ್ಯಾಪಾರ ಮಳಿಗೆಗಳನ್ನು ತೆರೆಯ ಬಹುದು.</td></tr>
<tr><td>10.</td><td>ವಿಚಾರ ವಿನಿಮಯಕ್ಕೆ ಅವಕಾಶಗಳು.<br>Consultation facilities.</td><td><table><tr><td>ಕೃಷಿ</td><td>ಅರಣ್ಯ</td><td>ತೋಟಗಾರಿಕೆ</td><td>ಪಶುಸಂಗೋಪನೆ</td><td>ಮೀನುಗಾರಿಕೆ</td><td>ರೇಷ್ಮ</td></tr><tr><td colspan="6">ಸದರಿ ಕ್ಷೇತ್ರದ ತಜ್ಞರು, ಭಾಗವಹಿಸುವ ರೈತರೊಡನೆ ವಿಚಾರ ವಿನಿಮಯಕ್ಕೆ ಲಭ್ಯವಾಗಿರಬೇಕು.</td></tr></table></td></tr>
<tr><td>11.</td><td>ಫುಡ್ ಕೋರ್ಟ್ವ್ಯವಸ್ಥೆ.<br>Food Court and Food arrangements for CBOs.</td><td>• ಸಮುದಾಯ ಸಂಸ್ಥೆಗಳ ಸದಸ್ಯರಿಗೆ ಘಟಕ ವೆಚ್ಚ ನೀಡಿ ಅವರೇ ಅವರ ಆಹಾರ–ಊಟ/ಉಪಹಾರ ತರುವುದಕ್ಕೆ ವ್ಯವಸ್ಥೆಮಾಡಬೇಕು ಅಥವಾ ಸ್ಥಳೀಯವಾಗಿ ಖಾಸಗೀ ಯವರಿಂದ ಉತ್ತಮ ಆಹಾರ ಲಭ್ಯವಾಗುವಂತೆ ವ್ಯವಸ್ಥೆಗೊಳಿಸಬೇಕು.</td></tr>
<tr><td>12.</td><td>ಧಾಖಲೀಕರಣ-<br>Documentation.</td><td>• ಫೋಟೋ ವ್ಯವಸ್ಥೆ.<br>• ವೀಡಿಯೋ ತೆಗೆಸುವುದು.<br>• ಪತ್ರಕರ್ತರೊಂದಿಗೆ ಸಂದರ್ಶನ ಮಾಡಿ, ಪ್ರಕಟಣೆಗಳಿಗೆ ಸೂಕ್ತ ಮಾಹಿತಿ ನೀಡಬೇಕು.</td></tr>
<tr><td>13.</td><td>ಪ್ರಭಾವ, ಕಲಿಕೆ.Impact and Learnings.<br>ಪರಿಣಾಮ ವಿಶ್ಲೇಷಣೆ.After Effects, Analysis.</td><td>• ಎಮ್, ಇ, ಎಲ್ ಮತ್ತು ಡಿ ಇವರು ಅದ್ಯಯನಮಾಡಿ ಪರಿಣಾಮ ಮತ್ತು ಪ್ರಭಾವದ ವಿವರಗಳನ್ನು ಧಾಖಲಿಸಿ ವಿಶ್ಲೇಷಿಸಿ ವರದಿ ಮಾಡಬೇಕು.</td></tr>
<tr><td>14.</td><td>ಮುಂದಿನ ಕ್ರಮಗಳ ಅವಶ್ಯಕತೆಗಳು.<br>Required Future actions.</td><td>• ಸರಿ ಮತ್ತು ತಪ್ಪುಗಳನ್ನು ಗುರಿತಿಸಿ, ಮತ್ತೆ ತಪ್ಪುಗಳು ಮರುಕಳಿಸದಂತೆ ಕ್ರಮವಹಿಸಬೇಕು.<br>• ಆ ಚಟುವಟಿಕೆಯ ಅನುಷ್ಟಾನದಲ್ಲಿ ಗುರಿತಿಸಿದ ನ್ಯೂನತೆಗಳನ್ನು ಸರಿಪಡಿಸಿ, ಉತ್ತಮ ಗುಣಮಟ್ಟದ ಮಾದರಿ ಚಟುವಟಿಕೆಯನ್ನು ಅಭಿವೃದ್ದಿ ಪಡಿಸಿ, ಮುಂಬರುವ ಯೋಜನೆಗಳಲ್ಲಿ ಅನುಷ್ಟಾನಕ್ಕೆ ಅನುವು ಮಾಡಿಕೊಡಬೇಕು.</td></tr>
</table>

# Cost Estimated for Jalayanamela

| S.No | Activity | Estimated Cost |
|---|---|---|
| 1 | Pamplets | 2000*2 = 4000 |
| 2 | Posters(4-5 Types, 10 each) | 50*130 = 6500 |
| 3 | Banners | 6*550 = 3300 |
| 4 | Shamiyana | = 20000 |
| 5 | Mike System | = 4000 |
| 6 | Watershed Model | = 10000 |
| 7 | Guest Lecture & Resourse person renumeration | = 5000 |
| 8 | Local Transport | = 5000 |
| 9 | Food Expenses | 500*80 = 40000 |
| **Total** | | **= 97800** |

**ಪ್ರತಿ ಜಲಾನಯನ ಮೇಳಾ ಏರ್ಪಡಿಸಲು ಅಂದಾಜು ವೆಚ್ಚ ಪಟ್ಟಿಯನ್ನು ನೀಡಿದ್ದು, ಸ್ಥಳೀಯವಾಗಿ ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ 1 ಲಕ್ಷ ಅನುದಾನ ಮೀರದಂತೆ ವೆಚ್ಚವನ್ನು ಭರಿಸುವುದು**

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ಸಂಖ್ಯೆ: ಜಅಇ/ಜ.ಕೃ.ನಿ(ಐಜಿಎ)/ಪ್ರ.ಚ/ತಾಂ.4/10–11

8ನೇ ಮಹಡಿ, ಕಾವೇರಿ ಭವನ, ಕ.ಗೃ.ಮಂ.ಸಂಕೀರ್ಣ
ಕೆ.ಜಿ.ರಸ್ತೆ, ಬೆಂಗಳೂರು 560 009
ದೂರವಾಣಿ #: 22100670 :: ಫ್ಯಾಕ್ಸ್ # 22100665
ಈಮೇಲ್:pvvjdaiga@gmail.com
ದಿನಾಂಕ:27–4–2011

ಸುತ್ತೋಲೆ: 4/2011–12

ವಿಷಯ: 2010–11 ನೇ ಸಾಲಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ ಪ್ರವೇಶದ್ವಾರ ಚಟುವಟಿಕೆಗಳನ್ನು ಕೈಗೊಳ್ಳುವ ಮೊದಲಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ.
ಉಲ್ಲೇಖ: ಉಸ್ತವಾರಿ, ಮೌಲ್ಯಮಾಪನ ಮತ್ತು ಕಲಿಕೆ ರವರ ವರದಿಯ ಅಧಾರದ ಮೇರಿಗೆ.

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ 2010–11ನೇ ಸಾಲಿಗೆ ಮಂಜೂರಾದ ಯೋಜನೆಗಳಿಗೆ ಪ್ರವೇಶದ್ವಾರ ಚಟುವಟಿಕೆಗಳನ್ನು ಕೈಗೊಳ್ಳಲು ತಾಂತ್ರಿಕ ಅನುಮೋದನೆಯನ್ನು ನೀಡಿದ್ದು, ಪ್ರವೇಶದ್ವಾರ ಚಟುವಟುಕೆಗಳನ್ನು ಕೈಗೊಳ್ಳುವುದಕ್ಕೆ ಮುಂಚಿತವಾಗಿ ಯೋಜನಾ ವ್ಯಾಪ್ತಿಯ ಜನರಿಗೆ ಯೋಜನೆಯ ಮತ್ತು ಪ್ರವೇಶದ್ವಾರ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಮತ್ತು ಅರಿವು ಮೂಡಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ, ಸರ್ಕಾರೇತರ ಸಂಸ್ಥೆಯ ಸಹಯೋಗದೊಂದಿಗೆ ಸಮುದಾಯ ಸಂಘಟಿಸುವ ಮತ್ತು ಅರಿವು ಮೂಡಿಸುವ (ಗ್ರಾಮಸಭೆ, ಜಾಥಾ ಮತ್ತು ಬೀದಿ ನಾಟಕ) ಕಾರ್ಯಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸುವುದು.

ಮೊದಲನೇ ಹಂತದಲ್ಲಿ ಸಮಗ್ರ ಜಲಾನಯನ ನಿರ್ವಹಣೆ ಯೋಜನೆ ಕಾರ್ಯಕ್ರಮದಡಿ ಪ್ರವೇಶದ್ವಾರ ಚಟುವಟಿಕೆಗಳಿಗೆ ಗ್ರಾಮ ಸಭೆ / ಗ್ರಾಮ ಪಂಚಾಯತಿ ಅನುಮೋದನೇ ಪಡೆದಿದ್ದರೂ ಸಮುದಾಯ ಆಧಾರಿತ ಗುಂಪುಗಳಾದ ಸ್ವಸಹಾಯ ಗುಂಪು, ಬಳಕೆದಾರ ಗುಂಪು ಮತ್ತು ಜಲಾನಯನ ಸಮಿತಿ ಸದಸ್ಯರು ಹಾಗೂ ಸಮುದಾಯ ಜನರಿಗೂ ಇದರ ಬಗ್ಗೆ ಮಾಹಿತಿ ಇಲ್ಲದೇ ಇರುವುದು ಗಮನಕ್ಕೆ ಬಂದಿರುತ್ತದೆ. ಯೋಜನಾ ಪ್ರದೇಶದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳಾದ ಗ್ರಾಮ ಸಭೆ, ಜಾಥಾ, ಬೀದಿ ನಾಟಕ ಹಾಗೂ ಇತರೆ ಚಟುವಟಿಕೆಗಳ ಜೊತೆಗೆ ಪ್ರವೇಶದ್ವಾರ ಚಟುವಟಿಕೆ ಬಗ್ಗೆಯೂ ಕಡ್ಡಾಯವಾಗಿ ಜನರ ಗಮನಕ್ಕೆ ತರುವುದು. ಪ್ರವೇಶದ್ವಾರ ಚಟುವಟಿಕೆ ಬಗ್ಗೆ ಅರಿವು ಇದೆ ಎಂದು ಖಚಿತಪಡಿಸಿಕೊಂಡ ನಂತರ ಎರಡನೇ ಹಂತದ ಪ್ರವೇಶದ್ವಾರ ಚಟುವಟಿಕೆಗಳನ್ನು ಕೈಗೊಳ್ಳುವುದು. ಪ್ರವೇಶದ್ವಾರ ಚಟುವಟಿಕೆಗಳನ್ನು ಮಳೆಗಾಲ ಬರುವುದಿಕ್ಕಿಂತ ಮುಂಚಿತವಾಗಿ ಮುಗಿಸಲು ಕ್ರಮವಹಿಸುವುದು. ಪ್ರವೇಶದ್ವಾರ ಚಟುವಟಿಕೆಗಳಿಗೆ ನಾಮಫಲಕವನ್ನು ಬರೆಸುವಾಗ ಕೇಂದ್ರ ಕಛೇರಿಯ ಸುತ್ತೋಲೆಯಲ್ಲಿ ನೀಡಿರುವ ಬಣ್ಣದ ಮಾದರಿಯಂತೆ ಹಾಗೂ ಯಾವ ವರ್ಷದಲ್ಲಿ/ಯೋಜನಾ ಹಂತದಲ್ಲಿ ಕೈಗೊಳ್ಳಲಾಗಿದೆ ಎಂಬುವುದರ ವಿವರಗಳನ್ನು ನಮೂದಿಸಿರಬೇಕು.

ನಿರ್ದೇಶಕರು
ಮತ್ತು **Co ordinator(IWMP)**
ಜಲಾನಯನ ಅಭಿವೃದ್ಧಿ ಇಲಾಖೆ

ಪ್ರತಿಯನ್ನು:

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು.
9. ಕೇಂದ್ರ ಕಛೇರಿಯ ಎಲ್ಲಾ ನೋಡಲ್ ಅಧಿಕಾರಿಗಳಿಗೆ.
10. ನಿರ್ದೇಶಕರು/ ಆಯುಕ್ತರ ಆಪ್ತ ಶಾಖೆಗೆ.
11. ಶ್ರೀಮತಿ.ಎಂ.ಜೆ.ಅಪರ್ಣ, ತಾಂತ್ರಿಕ ಅಧಿಕಾರಿಗಳು, ಇವರಿಗೆ, ಸುತ್ತೋಲೆಯ ಸಂಕಲನಕ್ಕಾಗಿ.

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ಸಂಖ್ಯೆ: ಜಅಇ/ಜ.ಕೃ.ನಿ(ಆ.ಉ)/CIG/ತಾಂ.4/2011-12

7ನೇ & 8ನೇ ಮಹಡಿ, ಕಾವೇರಿ ಭವನ,
ಕ.ಗೃ.ಮಂ.ಸಂಕೀರ್ಣ
ಕೆ.ಜಿ.ರಸ್ತೆ, ಬೆಂಗಳೂರು 560 009
ದೂರವಾಣಿ #: 22100670 :: ಫ್ಯಾಕ್ಸ್ # 22100665
ಈಮೇಲ್: sujala@vsnl.net
ದಿನಾಂಕ: 18-07-2011

**ಗೆ,**

ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು.

ವಿಷಯ: ಮೊದಲನೇ ಹಂತದ(2009-10)ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ಬಳಕೆದಾರ ಗುಂಪಿಗಳಿಂದ ವಿಶೇಷ ಅಸಕ್ತಿಯುಳ್ಳ ರೈತರನ್ನು ಗುರುತಿಸಿ ಸಮಾನ ಅಸಕ್ತಿಯುಳ್ಳ ಗುಂಪುಗಳನ್ನು (CIG) ರಚಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಮೊದಲನೇ ಹಂತದ(2009-10) ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ ಈಗಾಗಲೇ ನಿವ್ವಳ ಯೋಜನೆಯನ್ನು ತಯಾರಿಸುವ ಉದ್ದೇಶದಿಂದ 125-150 ಹೆಕ್ಟೇರ್ ಜಮೀನಿನಲ್ಲಿ ಬರುವ ಎಲ್ಲಾ ರೈತರನ್ನು ಹೊಳಗೊಂಡಂತೆ ಬಳಕೆದಾರರ ಗುಂಪುಗಳನ್ನು ರಚಿಸಲಾಗಿದೆ. ಪ್ರತಿ ಕಿರು ಜಲಾನಯನಕ್ಕೆ 4 ಬಳಕೆದಾರ ಗುಂಪುಗಳನ್ನು ರಚಿಸಲು ದಿನಾಂಕ:27-10-2011 ರಂದು ನಡೆದ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ತಿಳಿಸಲಾಗಿತ್ತು. ಅದರಂತೆ ಮೊದಲನೇ ಹಂತದ ಯೋಜನೆಯಡಿ ಪ್ರತಿ ಗುಂಪಿನಲ್ಲಿ ಕನಿಷ್ಟ 20 ಸದಸ್ಯರಿಂದ ಒಳಗೊಂಡು ಗರಿಷ್ಠ 158 ಸದಸ್ಯರು ಇರುವ ಒಟ್ಟು 3620 ಬಳಕೆದಾರರ ಗುಂಪುಗಳನ್ನು ರಚಿಸಲಾಗಿದೆ. ಅದರೆ ಬಳಕೆದಾರ ಗುಂಪುಗಳ ಸಂಖ್ಯೆ ಹಾಗೂ ಗಾತ್ರವು ಹೆಚ್ಚಾಗಿರುವುದರಿಂದ ಎಲ್ಲರನ್ನು ಒಟ್ಟುಗೂಡಿಸಿ ಕೃಷಿ ತಾಂತ್ರಿಕ ಸಂಬಂಧಿತ ತರಬೇತಿಗಳನ್ನು ಉತ್ತಮ ರೀತಿಯಲ್ಲಿ ನೀಡಲು ಸಾಧ್ಯವಾಗುವುದಿಲ್ಲ. ಲಭ್ಯವಿರುವ ಮಾಹಿತಿ ಪ್ರಕಾರ ಸುಮಾರು 1.4 ಲಕ್ಷ ರೈತರು ಬಳಕೆದಾರ ಗುಂಪಿನಲ್ಲಿ ಇರುತ್ತಾರೆ. ಈ ಎಲ್ಲಾ ರೈತರಿಗೆ ತರಬೇತಿಯನ್ನು ನೀಡುವುದು ಸಾಧ್ಯವಾಗದ ಮಾತು. ಅದುದರಿಂದ ಬಳಕೆದಾರ ಗುಂಪುಗಳಿಂದ ಅಸಕ್ತಿಯುಳ್ಳ ರೈತರನ್ನು ಅವರ ಅಸಕ್ತಿಯ ಅನುಗುಣವಾಗಿ ರೈತರನ್ನು ಗುರುತಿಸಿ ಸಮಾನ ಅಸಕ್ತಿಯುಳ್ಳ ಗುಂಪುಗಳನ್ನಾಗಿ ರಚಿಸಬೇಕಾಗಿದೆ. ಒಂದು ಸಮಾನ ಅಸಕ್ತಿ ಗುಂಪಿನ ಸದಸ್ಯರು ಒಂದೇ ಬಳಕೆದಾರ ಗುಂಪುನಿಂದ ಬರಬೇಕಾಗಿರುವುದಿಲ್ಲ, ವಿವಿಧ ಬಳಕೆದಾರ ಗುಂಪುಗಳಿಂದ ಅರಿಸಿ ಒಂದು ಸಮಾನ ಅಸಕ್ತಿಯುಳ್ಳ ಗುಂಪನ್ನು ರಚಿಸುವುದು.

ಈ ಗುಂಪುಗಳಿಗೆ ಅವರ ಅಸಕ್ತಿಯ ಅನುಸಾರವಾಗಿ ತಾಂತ್ರಿಕ ತರಬೇತಿಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಪ್ರತಿ ಗುಂಪಿನಲ್ಲಿ 15-20 ರೈತರು ಇರುವಂತೆ ಒಂದು ಕಿರು ಜಲಾನಯನದಲ್ಲಿ 2-3 ಗುಂಪುಗಳನ್ನು ರಚಿಸುವುದು. ಈ ಗುಂಪುಗಳಲ್ಲಿ ಆಯಾ್ದಾ ಅಸಕ್ತಿಯುಳ್ಳ ರೈತರನ್ನು ಗುರುತಿಸಿ ಜಂಟಿ ಭಾದ್ಯತಾ ಗುಂಪುಗಳನ್ನು ರಚಿಸಿ ಬ್ಯಾಂಕ್‌ಗಳಿಗೆ ಸಂಪರ್ಕ ಏರ್ಪಡಿಸಲು ಕ್ರಮವಹಿಸುವುದು. ಪ್ರಸ್ತುತ ಯು-2 ತರಬೇತಿಗಳು ನಡೆಯುತ್ತಿದ್ದು, ತರಬೇತಿ ಸಮಯದಲ್ಲಿ ರೈತರೊಡನೆ ಚರ್ಚಿಸಿ ಈ ಗುಂಪುಗಳನ್ನು ರಚಿಸಲು ಸೂಚಿಸಲಾಗಿದೆ. ಈಗಾಗಲೇ ಯು-2 ತರಬೇತಿಗಳು ಮುಗಿದಿರುವ ಪಕ್ಷದಲ್ಲಿ, ಅ ರೈತರನ್ನು ವೈಯುಕ್ತಿವಾಗಿ ಸಂಪರ್ಕಸಿ ಗುಂಪುಗಳನ್ನು ರಚಿಸಲು ಸೂಚಿಸಲಾಗಿದೆ.

ಈ ಕೆಲಸವು ಸರ್ಕಾರೇತರ ಸಂಸ್ಥೆಯ ತಂಡದ ನಾಯಕನ ಜವಾಬ್ದಾರಿಯಾಗಿದೆ, ಸ್ಥಳೀಯ ಮಟ್ಟದಲ್ಲಿ ಜಲಾನಯನ ಅಭಿವೃದ್ಧಿ ತಂಡದ ಮಾರ್ಗದರ್ಶನದಲ್ಲಿ ಸಮಾನ ಅಸಕ್ತಿಯುಳ್ಳ ಗುಂಪುಗಳನ್ನು ರಚಿಸಿ ಈ ಕೆಳಕಂಡ ನಮೂನೆಯಲ್ಲಿ ವಿವರಗಳನ್ನು ದಿನಾಂಕ: 30-8-2011 ರೊಳಗೆ ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದು.

| ವಿಷಯ | ಒಟ್ಟು ಗುಂಪುಗಳ ಸಂಖ್ಯೆ | ಒಟ್ಟು ರೈತರ ಸಂಖ್ಯೆ |
|---|---|---|
| ಕೃಷಿ | | |
| ತೋಟಗಾರಿಕೆ | | |
| ಅರಣ್ಯ | | |
| ಹೈನುಗಾರಿಕೆ | | |

| | | |
|---|---|---|
| ರೇಷ್ಮ ಸಾಕಾಣಿಕೆ | | |
| ಮೀನು ಸಾಕಾಣಿಕೆ | | |
| ಕುರಿ ಮತ್ತು ಮೇಕೆ ಸಾಕಾಣಿಕೆ | | |
| ಕೋಳಿ ಸಾಕಾಣಿಕೆ | | |
| ಇತರೆ | | |

**ನಿಮ್ಮ ಹಂತದಲ್ಲಿ ಪ್ರತಿ CIG ಗುಂಪುಗಳ ವಿವರಗಳನ್ನು ಈ ಕೆಳಕಂಡಂತೆ ಕ್ರೂಡಿಕರಿಸಿ ದಾಖಲಿಕರಿಸುವುದು.**

**ಸಮಾನ ಅಸಕ್ತಿ ಗುಂಪಿನ ಸಂಖ್ಯೆ:---------- ವಿಷಯ:------------- ಗ್ರಾ..ಪಂ:----------**

| ಕ್ರ.ಸ | ರೈತನ ಹೆಸರು | ಹಿಡುವಳಿ | ವರ್ಗ |
|---|---|---|---|
| | | | |
| | | | |
| | | | |

ನಿರ್ದೇಶಕರು

ಪ್ರತಿಯನ್ನು:

1. ಕೇಂದ್ರ ಕಛೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ.
12. ನಿರ್ದೇಶಕರು/ ಆಯುಕ್ತರ ಆಪ್ತ ಶಾಖೆಗೆ.
13. ತಾಂತ್ರಿಕ ಅಧಿಕಾರಿಗಳು-3, ಇವರಿಗೆ, ಸುತ್ತೋಲೆಯ ಸಂಕಲನಕ್ಕಾಗಿ.